ಅನುಬಂಧ

ಕರ್ನಾಟಕ ಸ್ಟಾಂಪು ಅಧಿನಿಯಮ 1957 ರ
(1957ರ ಕರ್ನಾಟಕಅಧಿನಿಯಮ 32) ಉದ್ಧೃತ ಭಾಗ

XX XX XX

20(1) .– ಪರಂತು, ವಿಮಾ ನಿಯಂತ್ರಕ ಮತ್ತು ಅಭಿವೃದ್ಧಿ ಪ್ರಾಧಿಕಾರದಿಂದ ಮನ್ನಣೆ ಪಡೆದ ಯಾವುದೇ ವಿಮ ಕಂಪನಿಯು ನೀಡಿದ ಕ್ರಮಬದ್ಧವಾದ ಹಕ್ಕುಮೂಲ ವಿಮಾ ಪಾಲಿಸಿಯಿಂದ ಹಸ್ತಾಂತರಣವು ಸಮರ್ಥಿತವಾಗಿದ್ದರೆ, ಸುಂಕವು ಸ್ವತ್ತಿನ ಮಾರುಕಟ್ಟೆ ಬೆಲೆಯ ಶೇಕಡ ಏಳು ಆಗಿರತಕ್ಕದ್ದು.

ಮತ್ತು ಪರಂತು, ಯಾವುದೇ ಬಾಡಿಗೆ – ಮಾರಾಟ ಒಪ್ಪಂದವನ್ನು ಬರೆದುಕೊಟ್ಟಿದ್ದಕ್ಕೆ 5ನೇ ಅನುಚ್ಛೇದದ (ಡಿ) ಬಾಬಿನ ಅಡಿಯಲ್ಲಿ ಅಗತ್ಯಪಡಿಸಲಾದಂತೆ ಕ್ರಯಾನುಸಾರ ಸ್ಟಾಂಪು ಶುಲ್ಕದೊಡನೆ ಸ್ಟಾಂಪು ಮಾಡಿದ್ದು ಮತ್ತು ಅಂಥ ಒಪ್ಪಂದವು ಮುಂದುವರೆದಿದ್ದು ತದನಂತರ ಹಸ್ತಾಂತರವನ್ನು ಬರೆದುಕೊಟ್ಟಿದ್ದರೆ ಅಂಥ ಹಸ್ತಾಂತರಣದ ಮೇಲಿನ ಸುಂಕವು ಹತ್ತು ರೂಪಾಯಿಗಳನ್ನು ಮೀರದ ಅಥವಾ ತದನಂತರ ಬರೆದುಕೊಟ್ಟ ಹಸ್ತಾಂತರಣದ ಮೇಲಿನ ಸುಂಕವಾಗಿರತಕ್ಕದ್ದು, ಅಂಥ ಹಸ್ತಾಂತರಣದ ಮೇಲೆ ಸಂದಾಯವಾಗುವ ಸುಂಕವು ಅಂಥ ನಿವೇಶನದ ಬಾಡಿಗೆ–ಮಾರಾಟ ಒಪ್ಪಂದ ಜಾರಿಗೆ ಬರುವ ದಿನಾಂಕದಂದು ಇರುವ ಮಾರುಕಟ್ಟೆ ಮೌಲ್ಯದ ಮೇಲೆ ಇರತಕ್ಕದ್ದು

XX XX XX

(2) ಅದು ಪ್ರವರ್ತಕನು ಬರೆದು ಕೊಟ್ಟಿದ್ದ ಮೊದಲ ಹಸ್ತಾಂತರಣ ಲಿಖಿತಕ್ಕೆ ಸಂಬಂಧಪಟ್ಟಿದ್ದರೆ, ಭೂ ಮಾಲೀಕ ಅಥವಾ ಅಭಿವೃದ್ಧಿಗಾರ ಎಂಬ ಯಾವುದೇ ಹೆಸರಿನಿಂದ ಕರೆಯಲ್ಪಟ್ಟಿರಲಿ, ಕರ್ನಾಟಕ ಮಾಲೀಕತ್ವ ಮೌಲ್ಯದ ಏಳೂವರೆ ಶೇಕಡ

ಫ್ಲಾಟುಗಳ (ನಿರ್ಮಾಣ, ಮಾರಾಟ, ವ್ಯವಸ್ಥಾಪನೆ ಮತ್ತು ವರ್ಗಾವಣೆಗೆ ಉತ್ತೇಜನದ ಸಕ್ರಮ) ಅಧಿನಿಯಮ, 1972ರ (1973ರ ಕರ್ನಾಟಕ ಅಧಿನಿಯಮ 16) 2ನೇ ಪ್ರಕರಣದ (ಎ) ಖಂಡದಲ್ಲಿ ಪರಿಭಾಷಿಸಲಾದಂತೆ 'ಫ್ಲಾಟ್' ನ ಅಥವಾ ಕರ್ನಾಟಕ ಅಪಾರ್ಟ್‌ಮೆಂಟ್‌ಗಳ ಮಾಲೀಕತ್ವ ಅಧಿನಿಯಮ, 1972ರ (1973ರ ಕರ್ನಾಟಕ ಅಧಿನಿಯಮ 17) 3ನೇ ಪ್ರಕರಣದ (ಎ) ಖಂಡದಲ್ಲಿ ಪರಿಬಾಷಿಸಲಾದಂತೆ 'ಅಪಾರ್ಟ್‌ಮೆಂಟ್'ನ ಆವರಣಗಳಿಗೆ

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

2009–10ನೇ ವರ್ಷದ ಆಯವ್ಯಯ ಭಾಷಣದಲ್ಲಿ ಕೃಷಿ ಭೂಮಿಯೂ ಸೇರಿದಂತೆ ಎಲ್ಲಾ ವಿಧವಾದ ಸ್ಥಿರ ಸ್ವತ್ತುಗಳ ಮಾರಾಟ ವ್ಯವಹಾರಗಳಲ್ಲಿ ಸ್ಟಾಂಪು ಶುಲ್ಕವನ್ನು ಶೇಕಡ ಏಳೂವರೆಯಿಂದ ಶೇಕಡ ಆರಕ್ಕೆ ಇಳಿಸುವುದಾಗಿ ಘೋಷಿಸಲಾಗಿದೆ.

ಆದ್ದರಿಂದ ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 34) ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ವಿಷಯವು ತುರ್ತು ಸ್ವರೂಪದ್ದಾದದ್ದರಿಂದ ಮತ್ತು ಕರ್ನಾಟಕ ವಿಧಾನಮಂಡಲದ ಎರಡೂ ಸದನಗಳು ಅಧಿವೇಶನದಲ್ಲಿಲ್ಲದಿದ್ದುದರಿಂದ ಕರ್ನಾಟಕ ರಾಜ್ಯಪಾಲರು ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧ್ಯಾದೇಶ, 2009ನ್ನು (2009ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 5) ಪ್ರಖ್ಯಾಪಿಸಿರುತ್ತಾರೆ.

ಈ ವಿಧೇಯಕವನ್ನು ಸದರಿ ಅಧ್ಯಾದೇಶದ ಬದಲಾಗಿ ತರಲಾಗಿದೆ.

ಆದ್ದರಿಂದ ಈ ವಿಧೇಯಕ.

H-359-51

FINANCIAL MEMORANDUM

There will be an approximate expenditure of rupees one crore by the proposed Legislative measure.

B.S. YEDDYURAPPA
Chief Minister

S.B. PATIL
Secretary
Karnataka Legislative Assembly

ANNEXURE

Extract from the Karnataka Municipal Corporations Act, 1976
(Karnataka Act No. 14 of 1977)

XX XX XX

7. Constitution of the Corporation .- (1) The Corporation shall consist of,-

(a) such number of elected councillors not being less than thirty and more than one hundred fifty as the Government may by notification determine;

(b) not more than ten persons in the case of Bangalore City Corporation and not more than five persons in the case of other City Corporations nominated by the Government from amongst the residents of the city,-

XX XX XX

ಅನುಬಂಧ – 2

ಕರ್ನಾಟಕ ವಿಧಾನ ಸಭೆ
ಹದಿಮೂರನೇ ವಿಧಾನಸಭೆ
ಮೂರನೇ ಅಧಿವೇಶನ

ಕರ್ನಾಟಕ ಸ್ಟಾಂಪು (ಎರಡನೇ ತಿದ್ದುಪಡಿ) ವಿಧೇಯಕ, 2009
(2009ರ ವಿಧಾನ ಸಭೆಯ ವಿಧೇಯಕ ಸಂಖ್ಯೆ 37)

ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 34) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯದ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತ ವಾಗತಕ್ಕದ್ದು:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ***ಕರ್ನಾಟಕ ಸ್ಟಾಂಪು (ಎರಡನೇ ತಿದ್ದುಪಡಿ) ಅಧಿನಿಯಮ, 2009*** ಎಂದು ಕರೆಯತಕ್ಕದ್ದು.

(2) ಇದು 2009ರ ಜೂನ್ 4ನೇ ದಿನಾಂಕದಿಂದ ಜಾರಿಗೆ ಬಂದಿದೆಯೆಂದು ಭಾವಿಸತಕ್ಕದ್ದು.

2. ಅನುಸೂಚಿಯ ತಿದ್ದುಪಡಿ.– ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 34) ಅನುಸೂಚಿಯಲ್ಲಿ,–

(1) 20ನೇ ಅನುಚ್ಛೇದದಲ್ಲಿ,–

(i) (1) ನೇ ಖಂಡದಲ್ಲಿ, (2)ನೇ ಅಂಕಣದಲ್ಲಿ, ಪರಂತುಕವನ್ನು ಬಿಟ್ಟುಬಿಡತಕ್ಕದ್ದು.

(ii) (2)ನೇ ಖಂಡದಲ್ಲಿ, (3)ನೇ ಅಂಕಣದಲ್ಲಿ "ಶೇಕಡಾ ಏಳೂವರೆ" ಎಂಬ ಪದಗಳಿಗೆ, "20(1)ನೇ ಅನುಚ್ಛೇದದಡಿಯಲ್ಲಿ ಹಸ್ತಾಂತರಣ

ಪತ್ರಕ್ಕೆ ವಿಧಿಸುವಷ್ಟೇ ಶುಲ್ಕ" ಎಂಬ ಅಂಕಿಗಳು, ಆವರಣ ಚಿಹ್ನೆಗಳು ಹಾಗೂ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(2) 41ನೇ ಅನುಚ್ಛೇದದಲ್ಲಿ, (ಇಬಿ) ಖಂಡದಲ್ಲಿ, 3ನೇ ಅಂಕಣದಲ್ಲಿ, "ಪ್ರತಿ ನೂರು ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ಏಳು ರೂಪಾಯಿಗಳು ಮತ್ತು ಐವತ್ತು ಪೈಸೆಗಳು" ಎಂಬ ಪದಗಳಿಗೆ "20(1)ನೇ ಅನುಚ್ಛೇದದಡಿಯಲ್ಲಿ ಹಸ್ತಾಂತರಣ ಪತ್ರಕ್ಕೆ ವಿಧಿಸುವಷ್ಟೇ ಶುಲ್ಕ" ಎಂಬ ಅಂಕಿಗಳು, ಆವರಣ ಚಿಹ್ನೆಗಳು ಹಾಗೂ ಪದಗಳನ್ನು ಪ್ರತಿಯೋಜಿಸತಕ್ಕದ್ದು.

3. ನಿರಸನ ಮತ್ತು ಉಳಿಸುವಿಕೆಗಳು.– (1) ಕರ್ನಾಟಕ ಸ್ಟ್ಯಾಂಪು (ತಿದ್ದುಪಡಿ) ಅಧ್ಯಾದೇಶ, 2009ನ್ನು (2009ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 5) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸನಗೊಳಿಸಿದ್ದರೂ ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದ ಮೂಲ ಅಧಿನಿಯಮದಡಿಯಲ್ಲಿ ಕೈಗೊಂಡ ಯಾವುದೇ ಕ್ರಮ ಅಥವಾ ಮಾಡಿದ ಯಾವುದೇ ಕಾರ್ಯವನ್ನು ಈ ಅಧಿನಿಯಮದ ಮೂಲಕ ತಿದ್ದುಪಡಿಯಾದ ಮೂಲ ಅಧಿನಿಯಮದಡಿಯಲ್ಲಿ ಕೈಗೊಳ್ಳ ಲಾಗಿದೆ ಅಥವಾ ಮಾಡಲಾಗಿದೆ ಎಂದು ಭಾವಿಸತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

2009–10ನೇ ವರ್ಷದ ಆಯವ್ಯಯ ಭಾಷಣದಲ್ಲಿ ಕೃಷಿ ಭೂಮಿಯೂ ಸೇರಿದಂತೆ ಎಲ್ಲಾ ವಿಧವಾದ ಸ್ಥಿರ ಸ್ವತ್ತುಗಳ ಮಾರಾಟ ವ್ಯವಹಾರಗಳಲ್ಲಿ ಸ್ಟಾಂಪು ಶುಲ್ಕವನ್ನು ಶೇಕಡ ಏಳೂವರೆಯಿಂದ ಶೇಕಡ ಆರಕ್ಕೆ ಇಳಿಸುವುದಾಗಿ ಘೋಷಿಸಲಾಗಿದೆ.

ಆದ್ದರಿಂದ ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 34) ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ವಿಷಯವು ತುರ್ತು ಸ್ವರೂಪದ್ದಾದದ್ದರಿಂದ ಮತ್ತು ಕರ್ನಾಟಕ ವಿಧಾನಮಂಡಲದ ಎರಡೂ ಸದನಗಳು ಅಧಿವೇಶನದಲ್ಲಿಲ್ಲದಿದ್ದುದರಿಂದ ಕರ್ನಾಟಕ ರಾಜ್ಯಪಾಲರು ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧ್ಯಾದೇಶ, 2009ನ್ನು (2009ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 5) ಪ್ರಖ್ಯಾಪಿಸಿರುತ್ತಾರೆ.

ಈ ವಿಧೇಯಕವನ್ನು ಸದರಿ ಅಧ್ಯಾದೇಶದ ಬದಲಾಗಿ ತರಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಕ್ರಮದಿಂದಾಗಿ ಯಾವುದೇ ಹೆಚ್ಚಿನ ವೆಚ್ಚವುಂಟಾಗುವುದಿಲ್ಲ.

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಗಳ ನಿಯಮಗಳ 80ನೇ ನಿಯಮದ (1)ನೇ ಉಪ ನಿಯಮದ ಅಡಿಯಲ್ಲಿ ಅಗತ್ಯಪಡಿಸಲಾದಂತೆ ವಿವರಣಾತ್ಮಕ ಹೇಳಿಕೆ

2009–10ನೇ ವರ್ಷದ ಆಯವ್ಯಯ ಭಾಷಣದಲ್ಲಿ ಕೃಷಿ ಭೂಮಿಯೂ ಸೇರದಂತೆ ಎಲ್ಲಾ ವಿಧವಾದ ಸ್ಥಿರ ಸ್ವತ್ತುಗಳ ಮಾರಾಟ ವ್ಯವಹಾರಗಳಲ್ಲಿ ಸ್ಟಾಂಪು ಶುಲ್ಕವನ್ನು ಶೇಕಡ ಏಳೂವರೆಯಿಂದ ಶೇಕಡ ಆರಕ್ಕೆ ಇಳಿಸುವುದಾಗಿ ಘೋಷಿಸಲಾಗಿದೆ.

ಆದ್ದರಿಂದ ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 34) ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ವಿಷಯವು ತುರ್ತು ಸ್ವರೂಪದ್ದಾದದ್ದರಿಂದ ಮತ್ತು ಕರ್ನಾಟಕ ವಿಧಾನಮಂಡಲದ ಎರಡೂ ಸದನಗಳು ಅಧಿವೇಶನದಲ್ಲಿಲ್ಲದಿದ್ದುದರಿಂದ ಕರ್ನಾಟಕ ರಾಜ್ಯಪಾಲರು ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧ್ಯಾದೇಶ, 2009ನ್ನು (2009ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 5) ಪ್ರಖ್ಯಾಪಿಸಿರುತ್ತಾರೆ.

ಜಿ. ಕರುಣಾಕರ ರೆಡ್ಡಿ
ಕಂದಾಯ ಸಚಿವರು

ಎಸ್.ಬಿ. ಪಾಟೀಲ್
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

ಅನುಬಂಧ

ಕರ್ನಾಟಕ ಸ್ಟಾಂಪು ಅಧಿನಿಯಮ 1957 ರ
(1957ರ ಕರ್ನಾಟಕ ಅಧಿನಿಯಮ 32) ಉದ್ಧೃತ ಭಾಗ

XX XX XX

20(1) .– ಪರಂತು, ವಿಮಾ ನಿಯಂತ್ರಕ ಮತ್ತು ಅಭಿವೃದ್ಧಿ ಪ್ರಾಧಿಕಾರದಿಂದ ಮನ್ನಣೆ ಪಡೆದ ಯಾವುದೇ ವಿಮ ಕಂಪನಿಯು ನೀಡಿದ ಕ್ರಮಬದ್ಧವಾದ ಹಕ್ಕುಮೂಲ ವಿಮಾ ಪಾಲಿಸಿಯಿಂದ ಹಸ್ತಾಂತರಣವು ಸಮರ್ಥಿತವಾಗಿದ್ದರೆ, ಸುಂಕವು ಸ್ವತ್ತಿನ ಮಾರುಕಟ್ಟೆ ಬೆಲೆಯ ಶೇಕಡ ಏಳು ಆಗಿರತಕ್ಕದ್ದು.

ಮತ್ತು ಪರಂತು, ಯಾವುದೇ ಬಾಡಿಗೆ – ಮಾರಾಟ ಒಪ್ಪಂದವನ್ನು ಬರೆದುಕೊಟ್ಟಿದ್ದಕ್ಕೆ 5ನೇ ಅನುಚ್ಛೇದದ (ಡಿ) ಬಾಬಿನ ಅಡಿಯಲ್ಲಿ ಅಗತ್ಯಪಡಿಸಲಾದಂತೆ ಕ್ರಯಾನುಸಾರ ಸ್ಟಾಂಪು ಶುಲ್ಕದೊಡನೆ ಸ್ಟಾಂಪು ಮಾಡಿದ್ದು ಮತ್ತು ಅಂಥ ಒಪ್ಪಂದವು ಮುಂದುವರೆದಿದ್ದು ತದನಂತರ ಹಸ್ತಾಂತರವನ್ನು ಬರೆದುಕೊಟ್ಟಿದ್ದರೆ ಅಂಥ ಹಸ್ತಾಂತರಣದ ಮೇಲಿನ ಸುಂಕವು ಹತ್ತು ರೂಪಾಯಿಗಳನ್ನು ಮೀರದ ಅಥವಾ ತದನಂತರ ಬರೆದು ಕೊಟ್ಟ ಹಸ್ತಾಂತರಣದ ಮೇಲಿನ ಸುಂಕವಾಗಿರತಕ್ಕದ್ದು, ಅಂಥ ಹಸ್ತಾಂತರಣದ ಮೇಲೆ ಸಂದಾಯವಾಗುವ ಸುಂಕವು ಅಂಥ ನಿವೇಶನದ ಬಾಡಿಗೆ–ಮಾರಾಟ ಒಪ್ಪಂದ ಜಾರಿಗೆ ಬರುವ ದಿನಾಂಕದಂದು ಇರುವ ಮಾರುಕಟ್ಟೆ ಮೌಲ್ಯದ ಮೇಲೆ ಇರತಕ್ಕದ್ದು

XX XX XX

(2) ಅದು ಪ್ರವರ್ತಕನು ಬರೆದು ಕೊಟ್ಟಿದ್ದ ಮೊದಲ ಹಸ್ತಾಂತರಣ ಲಿಖಿತಕ್ಕೆ ಸಂಬಂಧಪಟ್ಟಿದ್ದರೆ, ಭೂ ಮಾಲೀಕ ಅಥವಾ ಅಭಿವೃ ದ್ಧಿಗಾರ ಎಂಬ ಯಾವುದೇ ಹೆಸರಿನಿಂದ ಕರೆಯಲ್ಪಟ್ಟರಲಿ, ಕರ್ನಾಟಕ ಮಾಲೀಕತ್ವ ಫ್ಲಾಟುಗಳ ಮೌಲ್ಯದ ಶೇಕಡ ಏಳುವರೆ

H-3654-54

(ನಿರ್ಮಾಣ, ಮಾರಾಟ, ವ್ಯವಸ್ಥಾಪನೆ ಮತ್ತು ವರ್ಗಾವಣೆಗೆ ಉತ್ತೇಜನದ ಸಕ್ರಮ) ಅಧಿನಿಯಮ, 1972ರ (1973ರ ಕರ್ನಾಟಕ ಅಧಿನಿಯಮ 16) 2ನೇ ಪ್ರಕರಣದ (ಎ) ಖಂಡದಲ್ಲಿ ಪರಿಭಾಷಿಸಲಾದಂತೆ 'ಫ್ಲಾಟ್' ನ ಅಥವಾ ಕರ್ನಾಟಕ ಅಪಾರ್ಟ್‌ಮೆಂಟ್‌ಗಳ ಮಾಲೀಕತ್ವ ಅಧಿನಿಯಮ, 1972ರ (1973ರ ಕರ್ನಾಟಕ ಅಧಿನಿಯಮ 17) 3ನೇ ಪ್ರಕರಣದ (ಎ) ಖಂಡದಲ್ಲಿ ಪರಿಬಾಷಿಸಲಾದಂತೆ 'ಅಪಾರ್ಟ್‌ಮೆಂಟ್'ನ ಆವರಣಗಳಿಗೆ ಸಂಬಂಧಿಸಿದಂತೆ ಅಥವಾ ಸಹಕಾರಿ ಸಂಘ ಅಥವಾ ಕಂಪೆನಿಯಂದ ಅಥವಾ ಅದರ ಪರವಾಗಿ ಮಾಡಿದ ಆವರಣಗಳು ಅಥವಾ ಘಟಕದ ಷೇರಿನ ವರ್ಗಾವಣೆ ಮತ್ತು ಯಾವ ಸ್ವತ್ತಿನ ಮಾರುಕಟ್ಟೆ ಮೌಲ್ಯವು ಹಸ್ತಾಂತರಣದ ವಸ್ತುವಿಷಯ ವಾಗಿದೆಯೋ ಆ ಸ್ವತ್ತಿಗೆ ಸಂಬಂಧಿಸಿದ್ದರೆ,–

xx xx xx

41 **ಮೋಖ್ತ್ಯಾರನಾಮೆಗಳು.**–xx xx

(ಇಬಿ) ಕರ್ನಾಟಕ ರಾಜ್ಯದಲ್ಲಿನ ಸ್ಥಿರಾಸ್ತಿಯನ್ನು ತಂದೆ, ತಾಯಿ, ಪತ್ನಿ ಅಥವಾ ಪತಿ, ಮಕ್ಕಳು, ಸಹೋದರ, ಸಹೋದರಿಯರನ್ನು

ಮೊಖ್ತ್ಯಾರನಾಮೆಯ ವಿಷಯ ವಸ್ತುವಿನಲ್ಲಿ ಸ್ವತ್ತಿನ ಮಾರುಕಟ್ಟೆ ಬೆಲೆಗೆ ಪ್ರತಿಯೊಂದು ನೂರು

ಹೊರತು ಮಾಡಿದ್ದಲ್ಲಿ	ಪಡಿಸಿ,	ಮಾರಾಟ	**ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ಶೇಕಡ ಏಳೂವರೆಯಷ್ಟು:** ಪರಂತು ಲಿಖಿತದ ಮೇಲೆ ಈಗಾಗಲೇ ಸುಂಕ ಪಾವತಿಯಾಗಿದ್ದು ತದನಂತರ ಮಾರಾಟ ಅಥವಾ ವರ್ಗಾವಣೆ ಮೂಲಕ ಅಧಿಕಾರ ಪತ್ರ ಪಡೆದವನು ಅಥವಾ ಯಾವುದೇ ವ್ಯಕ್ತಿಯು ಮಾಡಿದಲ್ಲಿ ಸುಂಕವನ್ನು ಸರಿ ಹೊಂದಾಣಿಸಬಹುದು.

xx xx xx